ಉಳಿದ 16 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರದ ತೊಂದರೆ ಏನಿದೆ?

ಶ್ರೀ ಧರ್ಮಸಿಂಗ್ : 20 ಕೋಟಿ 75 ಲಕ್ಷ ರೂಪಾಯಿಗಳು ಕೇಂದ್ರದಿಂದ ಬರುವ ಹಣ. 6 ಕೋಟಿ 25 ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರ ಕೊಡುವ ಹಣ. ನಾವು ways and means, we have not taken. ಅವರಿಂದ ಎಷ್ಟು ಹಣ ಬರುತ್ತದೆಯೇ ಬರುತ್ತದೆ. ಆದರೂ ಕೂಡ ನಮ್ಮ ಬೊಕ್ಕಸದಿಂದ ನಾವು ಇಲ್ಲಿಯವರೆಗೆ ಇಷ್ಟು ಬಿಡುಗಡೆ ಮಾಡಿದ್ದೇವೆ. ಒಂದು ತಿಂಗಳ ಹಿಂದೆ ನೆರೆಹಾವಳಿ ಯಾವಾಗ ಉದ್ಭವವಾಯಿತು, ಆಗಿನಿಂದಲೂ ಇಷ್ಟು ಹಣವನ್ನು ಬಡುಗಡೆ ಮಾಡಿದ್ದೇವೆ ಎಂದು ಹೇಳುತ್ತಿರುವುದು

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ 157 ಕೋಟಿ ರೂಪಾಯಿ ನಷ್ಟವಾಗಿದೆ. ತಾವು 11 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ನಿಲುವಳಿ ಸೂಚನೆ ಬಂದಾಗ ಮಾತನಾಡಿ. ಆಗ ಸಾಕಷ್ಟು ಸಮಯವನ್ನು ಕೊಡುತ್ತೇನೆ.

ಶೃಂಗೇರಿ ತಾಲ್ಲೂಕು ತುಂಗಾನದಿಯ ಮೇಲ್ಭಾಗದ ಗಂಗಡಿಕಲ್ಲಿನಲ್ಲಿ ಅದಿರು ತೆಗೆಯಲು ಅನುಮತಿ

86 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶೃಂಗೇರಿ ತಾಲ್ಲೂಕು ತುಂಗಾ ನದಿಯ ಮೇಲ್ಭಾಗದಲ್ಲಿ ಗಂಗಡಿಕಲ್ಲಿನಲ್ಲಿ ಅದಿರು ತೆಗೆಯಲು ರಾಜ್ಯ ಸರ್ಕಾರದವರು ಅನುಮತಿ ನೀಡಿರುವರೆ?*

ಆ) *ಹಾಗಿದ್ದಲ್ಲಿ ಹಾಗೆ ಅನುಮತಿಯನ್ನು ಖಾಸಗಿಯವರಿಗೆ ಅಥವಾ ಸರ್ಕಾರಿ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಗೋ ಕೊಡಲಾಗಿದೆಯೇ, ಅನುಮತಿ ನೀಡಿರುವ ಸಂಸ್ಥೆಗಳು ಯಾವುವು (ವಿವರ ನೀಡುವುದು)*

ಇ) *ಇಂತಹ ಅನುಮತಿಗೆ ಸಾರ್ವಜನಿಕರಿಂದ ಪ್ರತಿರೋಧ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಡಿ.ಎ.. ಚಿಣ್ಣಪ್ಪ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಹೌದು

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಬಂದಿರತಕ್ಕ ವರದಿ ಮತ್ತು ನಾವು ಪ್ರತ್ಯಕ್ಷವಾಗಿ ಕಂಡಿರತಕ್ಕ ಸತ್ಯವನ್ನು ಸರ್ಕಾರ ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಿದೆ. ಚಿಕ್ಕಮಗಳೂರು ಜಿಲ್ಲೆಯ ಮಂತ್ರಿಗಳು ಇಲ್ಲಿ ಕುಳಿತಿದ್ದಾರೆ. ಅವರು ತುಂಗಾನದಿಯ ಮೇಲ್ದಂಡೆಯಲ್ಲಿ ಈ ಗಣಿ ಕಾರ್ಯ ಪ್ರಾರಂಭವಾಗಿರುವುದನ್ನು ನೋಡಿಕೊಂಡು ಬರಲು ಹೋಗಿದ್ದರು. ಆದರೆ, ತಾವು ತಮ್ಮ ಉತ್ತರದಲ್ಲಿ 'ಇಲ್ಲ' ವೆಂದು ಹೇಳುತ್ತಿದ್ದೀರಿ. ಜಯಪ್ರಕಾಶ್ ಕನ್‌ಸ್ಟ್ರಕ್ಷನ್ ಕಂಪನಿಯವರು ಮತ್ತು ಕುದುರೆಮುಖ ಕಬ್ಬಿಣ ಅದಿರು ಯೋಜನಾ ಅಧ್ಯಕ್ಷರು ಮತ್ತು ಅವರ ವಕ್ತಾಯ ಇದರಲ್ಲಿ ನಾವು ಆಸಕ್ತಿ ಹೊಂದಿದ್ದೇವೆಂದು ಹೇಳಿದ್ದಾರೆ. ಅಲ್ಲಿ ಅವರು 'ಸ್ಯಾಂಪಲ್ ಪಿಟ್ಸ್' ತೆಗೆಯುತ್ತಿದ್ದಾರೆನ್ನುವ ಕಾರಣಕ್ಕಾಗಿ ಅಲ್ಲಿನ ಪರಿಸರ ಹೋರಾಟದವರು ದೊಡ್ಡ ಪ್ರಮಾಣದಲ್ಲಿ ಗಲಾಟೆ ಮಾಡಿದ್ದಾರೆ. ಗಂಗಡಿಕಲ್ಲಿನಲ್ಲಿ ಅದಿರು ತೆಗೆಯಲು ರಾಜ್ಯ ಸರ್ಕಾರ ಅನುಮತಿ ನೀಡಿಲ್ಲವೆಂದು ಸಚಿವರು ತಮ್ಮ ಉತ್ತರದಲ್ಲಿ ಹೇಳುತ್ತಿದ್ದಾರೆ.

ಆದುದರಿಂದ, ಗಂಗಡಿಕಲ್ಲಿನಲ್ಲಿ ಯಾವುದೇ ಕಾರಣಕ್ಕಾಗಿ ಅದಿರು ತೆಗೆಯಲು ಸರ್ಕಾರದವರು ಅನುಮತಿ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೀರಾ?

ಶ್ರೀ ಡಿ.ಎ. ಚಿನ್ನಪ್ಪ : ಮಾನ್ಯ ಅಧ್ಯಕ್ಷರೆ, ಮೆ: ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಲಿಮಿಟೆಡ್, ಭಾರತ ಸರ್ಕಾರದ ಉದ್ಯಮ, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಮತ್ತು ಮೂಡಿಗೆರೆ ತಾಲ್ಲೂಕಿನ ಗಂಗಡಿಕಲ್ಲು ಇತ್ಯಾದಿ ಗ್ರಾಮದಲ್ಲಿ 3538 ಹೆಕ್ಟೇರ್ ಪ್ರದೇಶದಲ್ಲಿ ಹಾಗೂ ಮೂಡಿಗೆರೆ ತಾಲ್ಲೂಕಿನ ನೆಲ್ಲಿಬೀಡು ಇತ್ಯಾದಿ ಗ್ರಾಮಗಳ 2397 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬಿಣದ ಅದಿರು ಖನಿಜ ಅನ್ವೇಷಣಾ ಲೈಸೆನ್ಸ್‌ಗಳಿಗಾಗಿ ಅರ್ಜಿಗಳನ್ನು ದಿನಾಂಕ 23.4.92ರಂದು ಸಲ್ಲಿಸಿರುತ್ತಾರೆ. ಅರ್ಜಿದಾರ ಕಂಪನಿಯವರು ಕೋರಿರುವ ಪ್ರದೇಶಗಳ ವಿಸ್ತೀರ್ಣವನ್ನು ಕಡಿಮೆ ಮಾಡಿ ಗಂಗಡಿಕಲ್ಲು ಪ್ರದೇಶದಲ್ಲಿ 912 ಹೆಕ್ಟೇರ್‌ಗಳಿಗೆ ಮತ್ತು ನೆಲ್ಲಿಬೀಡು ಪ್ರದೇಶದಲ್ಲಿ 310 ಹೆಕ್ಟೇರ್‌ಗಳಿಗೆ ಮಾತ್ರ ಪರಿಷ್ಕೃತ ನಕ್ಷೆಗಳನ್ನು ದಿನಾಂಕ 10.3.93ರಂದು ಸಲ್ಲಿಸಿರುತ್ತಾರೆ. ಗಂಗಡಿಕಲ್ಲು ಪ್ರದೇಶದಲ್ಲಿ ಅನ್ವೇಷಣಾ ಲೈಸೆನ್ಸ್ ಮಂಜೂರಾತಿಯ ಪ್ರಸ್ತಾವನೆಗೆ 1980 ಅರಣ್ಯ ಸಂರಕ್ಷಣಾ ಅಧಿನಿಯಮದ ಅಡಿಯಲ್ಲಿ ಭಾರತದ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ಅನುಮೋದನೆ ಇನ್ನೂ ಕೊಟ್ಟಿಲ್ಲ. ಮತ್ತು 1994 ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಸ್ಥಳೀಯ ಜನರಿಂದ ಮತ್ತು ಲೋಕಸಭಾ ಸದಸ್ಯರಾದ ಶ್ರೀ ಹೆಚ್.ಡಿ. ದೇವೇಗೌಡರಿಂದ ಗಂಗಡಿಕಲ್ಲು ಪ್ರದೇಶದಲ್ಲಿ ಅದಿರು ತೆಗೆಯಲು ಮೆ ಜಯಪ್ರಕಾಶ್ ಇಂಡಸ್ಟ್ರೀಸ್ ಕಂಪನಿಗೆ ಅನುಮತಿ ನೀಡುವ ಬಗ್ಗೆ ಪ್ರತಿಭಟನೆ ವ್ಯಕ್ತವಾಗಿದೆ. ಈ ಪ್ರದೇಶದಲ್ಲಿ ಅನುಮತಿಯನ್ನು ನೀಡುವುದರಿಂದ ಜೀವ ಪರಿಸ್ಥಿತಿಯಲ್ಲಿ ಅಸಮತೋಲನವುಂಟಾಗುವುದೆಂದು ಮತ್ತು ಅರಣ್ಯ ಪರಿಸರವು ಹಾಳಾಗಿ ತುಂಗಭದ್ರಾ ಮತ್ತು ನೇತ್ರಾವತಿ ನದಿಗಳ ಜಲಾನಯನ ಪ್ರದೇಶದಲ್ಲಿ ದುಷ್ಪರಿಣಾಮದ ಬಗ್ಗೆ ಆತಂಕ ವ್ಯಕ್ತಪಡಿಸಿರುತ್ತಾರೆ. ಆದರೆ, ಸರ್ಕಾರವು ಮೆ: ಜಯಪ್ರಕಾಶ್ ಇಂಜಿನಿಯರಿಂಗ್ ಸಂಸ್ಥೆಗೆ ಆಗಲೀ ಅಥವಾ ಯಾವುದೇ ಸಂಸ್ಥೆಗೆ ಆಗಲೀ ಗಂಗಡಿಕಲ್ಲು ಪ್ರದೇಶದಲ್ಲಿ ಅದಿರನ್ನು ತೆಗೆಯಲು ಅನುಮತಿಯನ್ನು ನೀಡಿರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಅನುಮತಿ ನೀಡಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ, ಮತ್ತೆ ಅದನ್ನು ವಿವರವಾಗಿ ಹೇಳಬೇಕಾಗಿಲ್ಲ. ಗಂಗಡಿಕಲ್ಲು ಪ್ರದೇಶದಲ್ಲಿ ಯಾವುದೇ ಅದಿರನ್ನು ತೆಗೆಯುವುದಕ್ಕೆ ಪರವಾನಗಿ ಕೊಡುವುದಿಲ್ಲ ಇದು ಸರ್ಕಾರದ ನೀತಿಯಾಗಿದೆಯೆಂದು ಸ್ಪಷ್ಟವಾಗಿ ಹೇಳಬೇಕು. ಎರಡನೆಯದಾಗಿ, ಅಲ್ಲಿ ಅದಿರು ತೆಗೆಯಲು ಅನುಮತಿ ಇಲ್ಲದಿದ್ದರೂ ಕೂಡ ಜೆ.ಪಿ.ಸಿ.ಸಿ. ಯವರು ಈಗಾಗಲೇ ಅಲ್ಲಿ 'ಟೆಸ್ಟ್ ಪಿಟ್ಸ್' ತೆಗೆಯುತ್ತಿದ್ದಾರೆ, ಈ ಪ್ರಾಜೆಕ್ಟ್‌ಗೆ ಅನುಮತಿ ಕೊಡುವುದಿಲ್ಲವೆಂಬುದು ಸರ್ಕಾರದ ನೀತಿಯಾಗಿದ್ದಲ್ಲಿ ಇವರು ಹೇಗೆ ಅಲ್ಲಿಗೆ ಹೋಗಿ ಟೆಸ್ಟ್ ಪಿಟ್ಸ್ ತೆಗೆದರು? ಟೆಸ್ಟ್ ಪಿಟ್ಸ್ ತೆಗೆಯುತ್ತಿದ್ದರೆ, ಪರವಾನಗಿ ಕೊಟ್ಟಿದ್ದಾರೆಂತಾಯಿತು. ಪರವಾನಗಿ ಕೊಡದಿದ್ದರೆ ಹೇಗೆ ತೆಗೆಯುತ್ತಾರೆ? ಭದ್ರಾ ನದಿಯನ್ನು ನೋಡಿದರೆ, ನಾವು ಚಿಕ್ಕಂದಿನಲ್ಲಿ ನೋಡಿದ್ದೆವಲ್ಲಾ, ಹಾಗೆ ಈಗಿಲ್ಲ. ಅದರ ಬಣ್ಣವೇ ಬದಲಾಗಿ ಬರೀ ಬಗ್ಗಡದ ನೀರು ಅಲ್ಲಿ ಬರುತ್ತದೆ. ಇವರು ಯಾವ ಭಾಗದಲ್ಲಿ ಪಿಟ್ಸ್ ತೆಗೆಯುತ್ತಿದ್ದಾರೋ ಅಲ್ಲಿಯೇ ತುಂಗಾ ನದಿಯ ಮೂಲಸ್ಥಾನವಿದೆ. ಕೃಷ್ಣಾನದಿಯಲ್ಲೇನಾದರೂ ನೀರು ಬರುತ್ತಿದ್ದರೆ, ಈ ನದಿ ನಿಜವಾಗಿಯೂ ಜೀವಂತವಾಗಿದ್ದರೆ ಅದಕ್ಕೆ ತುಂಗಾ ನದಿಯ ಮೂಲಸ್ಥಾನವೇ ಆಧಾರ. ಅಲ್ಲಿಯೇ ಟೆಸ್ಟ್ ಪಿಟ್ಸ್ ತೆಗೆಯುತ್ತಿರುವುದರಿಂದ ಇಡೀ ನದಿಯೇ ಬತ್ತಿಹೋಗುತ್ತದೆ ದೊಡ್ಡ ಸಮಸ್ಯೆ ಇದೆ ಮತ್ತು ಬಗ್ಗಡದಿಂದ ಕೂಡಿದ ನೀರು ಬರುವಂಥ ಸಮಸ್ಯೆ ಇದೆ. ಆದುದರಿಂದ ಸರ್ಕಾರ ಸ್ಪಷ್ಟವಾಗಿ ಹೇಳಬೇಕು. ಯಾವುದೇ ಕಾರಣಕ್ಕಾಗಿ ಈ ಪ್ರದೇಶದಲ್ಲಿ ಅದಿರು ತೆಗೆಯಲು ಅವಕಾಶ ಕೊಡುವುದಿಲ್ಲ. ಇದು ಸರ್ಕಾರದ ನೀತಿಯಾಗಿದೆ ಎಂದೂ ಮತ್ತು ಅಲ್ಲಿ ಏನಾದರೂ ಪಿಟ್ ತೆಗೆದಿದ್ದರೆ ಯಾವ ರೀತಿಯ ಕಾನೂನು ಕ್ರಮ ತೆಗೆದುಕೊಳ್ಳುತ್ತೀರಿ? ಅವರು ಪಿಟ್ಸ್ ಅನ್ನು ಯಾರ ಪರವಾನಗಿ ಮೇಲೆ ತೆಗೆದರು?

ಶ್ರೀ ಡಿ.ಎ. ಚಿನ್ನಪ್ಪ : ಇದರ ಬಗ್ಗೆ ವಿಚಾರಿಸಲಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ವಿಚಾರಿಸುವುದೇನಿದೆ? ವಿಚಾರ ಸ್ಪಷ್ಟವಾಗಿದೆ. ಅಲ್ಲಿ ಅದಿರು ತೆಗೆಯುತ್ತಿರುವುದರಿಂದ ಪರಿಸರ ಹೋರಾಟಗಾರರು ಪ್ರತಿಭಟನೆ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಇಲ್ಲಿಯವರೆಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆಯೆಂದು ಹೇಳಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಸದಸ್ಯರಾದ ಚಂದ್ರೇಗೌಡರು ಆ ಭಾಗದಿಂದಲೇ ಬರತಕ್ಕಂಥವರು, ಅಲ್ಲಿ ಅದಿರನ್ನು ತೆಗೆಯುತ್ತಿದ್ದಾರೆಂದು ಹೇಳುತ್ತಿದ್ದಾರೆ. ಇದರಲ್ಲಿ ಏನೋ ಒಳಸಂಚು, ವ್ಯವಹಾರ ನಡೆಯುತ್ತಿದೆ.

ಶ್ರೀ ಡಿ.ಎ. ಚಿನ್ನಪ್ಪ : ಅಲ್ಲಿ ಅದಿರು ತೆಗೆಯುತ್ತಿದ್ದರೆ ಅದನ್ನು ಕೂಡಲೇ ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : ಹಾಗಾದರೆ ಅಲ್ಲಿ ಕಾನೂನು ಬಾಹಿರವಾಗಿ ಪಿಟ್ಸ್ ತೆಗೆದಿದ್ದರೆ ಅವರ ಮೇಲೆ ಏನು ಕಾನೂನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ.ಎ. ಚಿನ್ನಪ್ಪ : ಅಲ್ಲಿ ಪಿಟ್ಸ್ ತೆಗೆಯುತ್ತಿದ್ದರೆ ಕೂಡಲೇ ನಿಲ್ಲಿಸಿ, ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಬೀದರ್ ಜಿಲ್ಲೆಯಲ್ಲಿ ಆಶ್ರಯ ಯೋಜನೆ

272 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು)?

ಆ) ಇದೇ ಅವಧಿಯಲ್ಲಿ ಜಿಲ್ಲೆಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿತ್ತು?

ಇ) ಇದಕ್ಕಾಗಿ ಕಳೆದ 2 ವರ್ಷಗಳಿಂದ ಮೀಸಲಾಗಿಟ್ಟಿದ್ದ ಹಣದ ಪ್ರಮಾಣವೆಷ್ಟು? ಮತ್ತು ಖರ್ಚು ಮಾಡಲಾದ ಹಣದ ಪ್ರಮಾಣವೆಷ್ಟು?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಆಶ್ರಯ ಯೋಜನೆ ಅನುಷ್ಠಾನದ ಪ್ರಾರಂಭದಿಂದ 1994 ಜುಲೈ ಅಂತ್ಯದ ವರೆಗೆ ಬೀದರ್ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಗೃಹ ಮಂಡಳಿಯಿಂದ ನಿರ್ಮಿಸಿದ ಮನೆಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ

	ತಾಲ್ಲೂಕು	ಜಿಲ್ಲಾಧಿಕಾರಿಗಳು		ಕರ್ನಾಟಕ ಗೃಹ ಮಂಡಳಿ	
		ಗ್ರಾಮ	ನಗರ	ಗ್ರಾ	ನಗರ
1)	ಬೀದರ್	118	16	32	93
2)	ಔರಾದ್	204	-	-	-
3)	ಬಸವ ಕಲ್ಯಾಣ	214	29	15	-
4)	ಭಾಲ್ಕಿ	206	-	64	-
5)	ಹುಮ್ನಾಬಾದ್	162	-	-	20
	ಒಟ್ಟು	904	45	111	113

ಆ) ಸದರಿ ಅವಧಿಯಲ್ಲಿ ಜಿಲ್ಲಾಧಿಕಾರಿಗಳಿಂದ 2,250 ಹಾಗೂ ಕರ್ನಾಟಕ ಗೃಹ ಮಂಡಳಿಯಿಂದ 750 ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ